# ವಿಶ್ವಮಾನವತ್ವದ ಕೊರತೆ

ವಿಶ್ವಸಂಸ್ಥೆಯಲ್ಲಿ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಮ್ಮ ಮೊದಲ ಭಾಷಣ ಮಾಡಿದರು. ವಿಶ್ವಸಂಸ್ಥೆಯ ಇತಿಹಾಸದಲ್ಲಿ ಅತಿ ಹೆಚ್ಚು ಸದ್ದು ಮಾಡಿದ ಏಳು ಭಾಷಣಗಳಲ್ಲಿ ಅದು ಒಂದಾಗಿ ಸೇರಿಹೋಯಿತು. ಅದಕ್ಕೆ ಕಾರಣ ಉತ್ತರ ಕೊರಿಯಾ ದೇಶವು ಅಣು ಬಾಂಬ್ ತಯಾರಿಸಿ ಪರೀಕ್ಷೆ ನಡೆಸಿರುವುದು. ಅದರ ಸರ್ವಾಧಿಕಾರಿ ಕಿಮ್ ಹುಚ್ಚನಂತೆ ಜಪಾನ್, ದಕ್ಷಿಣ ಕೊರಿಯಾ ದೇಶಗಳನ್ನು ಬೂದಿಯಾಗಿಸುತ್ತೇನೆ ಎಂದು ಗುಡುಗಿರುವುದು ಮತ್ತು ಇತರ ಶತ್ರುಗಳಿಗೆ ದುಃಸ್ವಪ್ನವಾಗಿರುವುದು. ಈ ಸಂದರ್ಭದಲ್ಲಿ ಟ್ರಂಪ್ ದೊಡ್ಡಣ್ಣನಂತೆ ಗದರುವುದು ಬೇಕಿರಲಿಲ್ಲ. ಜಾಗತಿಕ ವೇದಿಕೆಯನ್ನು ಬಳಸಿಕೊಂಡು ಆತ ಉತ್ತರ ಕೊರಿಯಾದ ಅಧಿಕಾರಸ್ಥರಿಗೆ ಸ್ವಲ್ಪ ಬುದ್ಧಿಮಾತು ಹೇಳಿದ್ದರೆ ಸಾಕಾಗಿತ್ತು. ಆದರೆ ಅವರು ಇಡೀ ದೇಶವನ್ನು ಸರ್ವನಾಶ ಮಾಡುತ್ತೇವೆಂದು ಹೇಳಿರುವುದು ಬಾಲಿಶವೆನಿಸುತ್ತದೆ. ದೊಡ್ಡದೇಶದ ಹಿರಿಯ ನಾಯಕನಿಗೆ ಆ ಮಾತುಗಳು ತಕ್ಕುದಾಗಿರಲಿಲ್ಲ. ಅದೇ ವೇದಿಕೆಯಲ್ಲಿ ನಮ್ಮ ವಿದೇಶಾಂಗ ಮಂತ್ರಿ ಸುಷ್ಮಾ ಸ್ವರಾಜ್ ತಮ್ಮ ಭಾಷಣದಲ್ಲಿ ನೆರೆಯ ಪಾಕಿಸ್ತಾನವನ್ನು 'ಉಗ್ರವಾದೀ ರಾಷ್ಟ್ರ' ಎಂದು ಜರೆದರು. ಅದನ್ನು ನಮ್ಮ ದೇಶದ ಮಾಧ್ಯಮಗಳು ಮುಖಪುಟದ ಸುದ್ದಿ ಮಾಡಿ ಸಂಭ್ರಮಿಸಿದವು.

ನನ್ನನ್ನು ಕಾಡುತ್ತಿರುವ ಪ್ರಶ್ನೆ ಏನೆಂದರೆ; ಬಲಿಷ್ಠವಾಗಿರುವ ಒಂದು ರಾಷ್ಟ್ರ, ಮನುಷ್ಯರೇ ಇರುವ ಭೂಭಾಗದ ಇನ್ನೊಂದು ರಾಷ್ಟ್ರವನ್ನು ಶತ್ರು ಎಂದು ಪರಿಗಣಿಸಿ ಸಂಪೂರ್ಣವಾಗಿ ನಾಶ ಮಾಡಿಬಿಡಬಹುದೆ? ಮತ್ತು, ಒಂದು ರಾಷ್ಟ್ರ ತನ್ನ ಸಮಗ್ರ ರೂಪದಲ್ಲಿ ಉಗ್ರವಾದಿಯಾಗಲು ಸಾಧ್ಯವೆ? ಹಾಗೆ ಆಗಲು ಕಾರಣಗಳೇನು? ಆ ಎರಡೂ ದೇಶಗಳ ಜನಸಮೂಹದಲ್ಲಿ ತಲೆತಿರುಕರು ಮತ್ತು ಮೇಧಾವಿಗಳು, ಕಟುಕರು ಮತ್ತು ಹೃದಯವಂತರು ಒಟ್ಟಾಗಿ ಜೀವಿಸುತ್ತಿಲ್ಲವೆ? ಉತ್ತರ ಕೊರಿಯಾ ತನ್ನ ಬಾಲವನ್ನು ಸುಟ್ಟುಕೊಂಡಿದೆ ಎಂದು ಇಡೀ ದೇಹವನ್ನು ನಾಶಗೊಳಿಸಬಹುದೆ? ಪಾಕಿಸ್ತಾನದಲ್ಲಿ ಬಡವರು ಮತ್ತು ಶ್ರೀಮಂತರು, ದೈವಭಕ್ತರು ಮತ್ತು ಉಗ್ರವಾದಿಗಳು, ಕಳ್ಳರು ಮತ್ತು ದಾನಿಗಳನ್ನು ನಾವು ಕಾಣಲಾರೆವೆ? ಒಂದು ದೇಶವನ್ನು ಉಗ್ರಗಾಮಿ ದೇಶ ಎಂದು ಬ್ರ್ಯಾಂಡ್ ಮಾಡುವುದು ಹೇಗೆ? ರಾಜಕೀಯ ಜೀವನದಲ್ಲಿ ದಶಕಗಳನ್ನು ಕಳೆದಿರುವ ಈ ನಾಯಕರಿಗೆ 'ರಾಷ್ಟ್ರದ' ಪರಿಕಲ್ಪನೆಯನ್ನು ಸರಿಯಾಗಿ ಗ್ರಹಿಸಲು ಸಾಧ್ಯವಾಗದಿರುವುದು ಖೇದವೆನಿಸುತ್ತದೆ. ದ್ವೇಷವನ್ನು ದ್ವೇಷದಿಂದ ಗೆಲ್ಲಲಾಗದು ಎಂಬ ಬುದ್ಧವಾಣಿ ನಮಗೆ ಅರ್ಥವಾದಂತೆ ಕಾಣಿಸುವುದಿಲ್ಲ. ದ್ವೇಷವೆಂಬುದು ಬೆಂಕಿ. ನಾಶವೇ ಅದರ ಕರ್ತೃತ್ವ ಮತ್ತು ಶಕ್ತಿ. ವಿನಾಶದಿಂದಲೇ ಅದು ಉಲ್ಬಣಗೊಳ್ಳುತ್ತದೆ.

ಪುರಾಣದ ಈ ಕಥೆಯನ್ನು ಸಾಂದರ್ಭಿಕವಾಗಿ ಉಲ್ಲೇಖಿಸಬಹುದಾಗಿದೆ. ಕಾಮನನ್ನು ಸುಡಲು ಶಿವ ತನ್ನ ಮೂರನೆಯ ಕಣ್ಣನ್ನು ತೆರೆದಾಗ ಕಾಮ ಸುಟ್ಟು ಭಸ್ಮವಾಗುತ್ತಾನೆ. ಆದರೆ ಆ ಜ್ವಾಲೆ ಶಿವನಲ್ಲಿಗೆ ಹಿಂದಿರುಗುವುದಿಲ್ಲ. ಶಿವನು ಅಲ್ಲಿಂದ ಕಣ್ಮರೆಯಾಗುತ್ತಲೇ ಎಲ್ಲ ದೇವತೆಗಳನ್ನು, ಲೋಕಗಳನ್ನು ಸುಡಲುತೊಡಗುತ್ತದೆ. ಆಗ ಆಪದ್ಬಾಂಧವನಾಗಿ ಬಂದ ಬ್ರಹ್ಮ ಆ ಜ್ವಾಲೆಯನ್ನು ತಡೆದು ಒಂದು ಹೆಣ್ಣು ಕುದುರೆಯನ್ನಾಗಿ ಮಾಡುತ್ತಾನೆ. ಆ ಕುದುರೆಯು ಸಹ ಬಾಯಿಯಿಂದ ಬೃಹದಾಕಾರದ ಬೆಂಕಿಯ ಜ್ವಾಲೆಯನ್ನು ಉಗುಳತೊಡಗುತ್ತದೆ. ಆಗ ಬ್ರಹ್ಮ ಒಂದು ಉಪಾಯವನ್ನು ಹೂಡಿ ಕುದುರೆಯನ್ನು ಸಾಗರದೇವತೆಯ ಬಳಿ ಕರೆದೊಯ್ಯುತ್ತಾನೆ. ಈ ಕುದುರೆಯು ಮುಕ್ಕಣ್ಣನ ಮೂರನೆಯ ಉರಿಗಣ್ಣಿನ ಕೋಪದ ಬೆಂಕಿಯಿಂದ ಹುಟ್ಟಿದೆ. ಇದನ್ನು ನಿನ್ನ ಒಡಲೊಳಗಿಟ್ಟು ಮುಂದಿನ ಜಲಪ್ರಳಯವಾಗುವವರೆಗೂ ಕಾಯಬೇಕು. ಇಲ್ಲವಾದರೆ ಇದು ದೇವತೆಗಳನ್ನು ಮತ್ತು ಎಲ್ಲ ಲೋಕಗಳನ್ನು ಸುಟ್ಟು ನಾಶಮಾಡುತ್ತದೆ ಎಂದು ಹೇಳುತ್ತಾನೆ. ಸಾಗರಮಾತೆ ಒಪ್ಪಿ ಕುದುರೆಯನ್ನು ಜಲಪಾತಾಳಕ್ಕೆ ಕರೆದೊಯ್ಯುತ್ತಾಳೆ.

ಆ ಬೆಂಕಿಯು ಕೇವಲ ಶಿವನ ಕೋಪದಿಂದ ಉದಿಸಿದ ಬೆಂಕಿಯಲ್ಲ. ಅದು ಕಾಮನನ್ನು ಸುಟ್ಟ ಬೆಂಕಿಯೂ ಹೌದು. ಅಲ್ಲಿ ಶಿವನ ಕೋಪದ ಜ್ವಾಲೆಯೂ ಇದೆ, ಕಾಮನ ಕಾಮದ ಜ್ವಾಲೆಯೂ ಇದೆ. ಒಂದು ಇನ್ನೊಂದನ್ನು ಸುಡಲು ತೊಡಗಿದಾಗ ಜ್ವಾಲೆ ದ್ವಿಗುಣಗೊಳ್ಳುತ್ತದೆ. ಬೆಂಕಿಯುಂಡೆಗಳಾಗಿ ವಿನಾಶಕ್ಕೆ ಸಿದ್ಧಸ್ಥಿತಿಯಲ್ಲಿಯೇ ಇರುತ್ತವೆ. ದೊಡ್ಡಣ್ಣ ಅಮೇರಿಕ ಮಾಡಬೇಕಾಗಿದ್ದದ್ದು ಬ್ರಹ್ಮನಾಗುವ ಕೆಲಸವನ್ನು. ಅದನ್ನು ಬಿಟ್ಟು ತಾನೇ ಶಿವನಾಗುವ ಪ್ರಯತ್ನಮಾಡಿದರೆ ಲೋಕದ ಪ್ರಳಯಕ್ಕೆ ನಾಂದಿ ಹಾಡಿದಂತಾಗುವುದಿಲ್ಲವೆ?

ಈಗ ವಿಶ್ವಸಂಸ್ಥೆಯು ತುರ್ತಾಗಿ ಮಾಡಬೇಕಾಗಿರುವ ಕೆಲಸವೆಂದರೆ, ಅಣುರಾಷ್ಟ್ರಗಳನ್ನು ಒಲೈಸಿ ಅಣುಬಾಂಬುಗಳನ್ನು ಸಂಪೂರ್ಣ ನಿಷ್ಕ್ರಿಯಗೊಳಿಸುವುದು. ಇಲ್ಲದಿದ್ದರೆ ಮಾನವ ಕುಲವನ್ನು ಪೈಶಾಚಿಕ ಅನರ್ಥದ ರುದ್ರನರ್ತನಕ್ಕೆ ದೂಡಿದಂತಾಗುತ್ತದೆ. ಅಣುಬಾಂಬಿನ ಸ್ಫೋಟದಿಂದ ಮೂರು ತರಹದ ಪರಿಣಾಮ ಉಂಟಾಗುತ್ತದೆ. ಸ್ಫೋಟಕ್ಕೆ ನೇರವಾಗಿ ಸಿಕ್ಕ ಬೃಹತ್ ಸ್ಥಿರ ಕಟ್ಟಡಗಳು, ಅಣೆಕಟ್ಟುಗಳು, ಸೇತುವೆಗಳು ಇತರ ಚರಾಚರ ವಸ್ತುಗಳು ಪುಡಿಪುಡಿಯಾಗುತ್ತವೆ. ಎರಡನೆಯದು, ಶಿವನ ಉರಿಗಣ್ಣಿನಿಂದ ನೇರವಾಗಿ ಬಂದಂತೆ ಉಗುಳುವ ಬೆಂಕಿಯುಂಡೆಗಳು; ಇವುಗಳ ಸಂಪರ್ಕಕ್ಕೆ ಸಿಕ್ಕಿದರೆ ಜನರು ಆವಿಯಾಗಿ ಹೊರಟುಹೋಗುವರು. ಮೂರನೆಯದು ನಿಜವಾದ ನರಕ. ವಿಕಿರಣ ಪ್ರಸರಣದಿಂದ ಸುತ್ತಲೂ, ದೂರದೂರಿನಲ್ಲೆಲ್ಲೊ ಮುಂದೆ ಹುಟ್ಟಲಿರುವವರನ್ನೂ ನಿಧಾನ ಕೊಲ್ಲುವ ರೋಗ ಆವರಿಸಿಕೊಳ್ಳುತ್ತದೆ. ಅಂಗವೈಕಲ್ಯ, ಮತಿಭ್ರಮಣೆ, ರೌರವ ನರಕದಲ್ಲಿ ಏನೆಲ್ಲ ಕಲ್ಪಿಸಬಹುದೊ ಅದು ಭೂಮಿಯಲ್ಲೇ ಸಂಭವಿಸುತ್ತದೆ. ಮನುಷ್ಯರಾದವರು ಅದನ್ನು ಆಹ್ವಾನಿಸಬೇಕೆ? ಆಧುನಿಕ ಶಕ್ತಿ ರಾಷ್ಟ್ರಗಳೆನಿಸಿಕೊಳ್ಳಲು ಅಣುಬಾಂಬ್ ಅವಶ್ಯಕವೆನಿಸಿದರೆ ಎರಡನೆಯ ಮಹಾಯುದ್ಧದಲ್ಲಿ ಪಡೆದ ಕಹಿ ಅನುಭವಗಳಿಂದ ನಾವು ಪಾಠ ಕಲಿತಿಲ್ಲವೆಂದೇ ಅರ್ಥ.

■ ಮೂಚಿ

## ಮಾತೇ ಮುತ್ತು

★ ನೀವು ಸಿಟ್ಟಿಗೆದ್ದ ಪ್ರತಿ ನಿಮಿಷಕ್ಕೂ 60 ಸೆಕೆಂಡುಗಳ ಸಂತೋಷವನ್ನು ಕಳೆದುಕೊಳ್ಳುತ್ತೀರಿ.

—ರಾಲ್ಫ್ ಎಮರ್ಸನ್

★ ಮೂರ್ಖ ತಮಾಷೆಗಿಂತ ತಮಾಷೆಯಾಗಿ ಕಾಣುವ ಮೂರ್ಖ ಒಳ್ಳೆಯವನು.

—ವಿಲಿಯಂ ಷೇಕ್ಸ್‌ಪಿಯರ್

★ ಪ್ರತಿಯೊಬ್ಬ ಮಹಿಳೆಯೂ ಬಂಡಾಯಕಾರ್ತಿ. ಸಾಮಾನ್ಯವಾಗಿ ತನ್ನ ವಿರುದ್ಧವೇ ಆಕೆ ಬಂಡಾಯ ಏಳುತ್ತಾಳೆ.

—ಆಸ್ಕರ್ ವೈಲ್ಡ್

★ ಒಂದೋ ತುಂಬ ಸುಲಭ; ಇಲ್ಲವೇ ಅಸಾಧ್ಯ. ಅದರ ನಡುವೆ ಯಾವುದೂ ಇಲ್ಲ.

—ಸಾಲ್ವಡೋರ್ ಡಾಲಿ

★ ನಾನು ವ್ಯಾಕರಣಬದ್ಧವಾಗಿ ಮಾತನಾಡಲು ಬಯಸುವುದಿಲ್ಲ; ನಾನು ಮಹಿಳೆಯರಂತೆ ಮಾತನಾಡಲು ಬಯಸುತ್ತೇನೆ.

—ಜಾರ್ಜ್ ಬರ್ನಾರ್ಡ್ ಷಾ

★ ಕೆಟ್ಟ ಮನುಷ್ಯ ಭಯದಿಂದ ಅನುಸರಣೆ ಮಾಡುತ್ತಾನೆ; ಒಳ್ಳೆಯ ಮನುಷ್ಯ ಪ್ರೀತಿಯಿಂದ ಅನುಸರಣೆ ಮಾಡುತ್ತಾನೆ.

—ಅರಿಸ್ಟಾಟಲ್

★ ದೊರೆಯಾಗಲೀ, ರೈತನಾಗಲೀ; ಮನೆಯಲ್ಲಿ ನೆಮ್ಮದಿ ಇದ್ದವನು ಮಾತ್ರ ಸಂತೋಷವಾಗಿರಬಲ್ಲ.

—ಗಾಯಥೆ

★ ದುಃಖವನ್ನು ಒಬ್ಬನೇ ಅನುಭವಿಸಬಹುದು. ಆದರೆ ಸಂತೋಷವನ್ನು ಪೂರ್ಣರೂಪದಲ್ಲಿ ಅನುಭವಿಸಲು ಇನ್ನೊಬ್ಬನ ಜತೆಗೆ ಹಂಚಿಕೊಳ್ಳಲೇಬೇಕಾಗುತ್ತದೆ.

—ಮಾರ್ಕ್ ಟ್ವೈನ್

★ ಸ್ವಾತಂತ್ರ್ಯವೆಂದರೆ ಜನರು ಯಾವುದನ್ನು ಕೇಳಲು ಬಯಸುವುದಿಲ್ಲವೋ ಅದನ್ನು ಹೇಳುವ ಹಕ್ಕು.

—ಜಾರ್ಜ್ ಆರ್ವೆಲ್

★ ನಾವು ಯುವಕರಿಗಾಗಿ ಯಾವಾಗಲೂ ಭವಿಷ್ಯವನ್ನು ನಿರ್ಮಿಸಲು ಆಗುವುದಿಲ್ಲ; ಆದರೆ ಭವಿಷ್ಯಕ್ಕಾಗಿ ಯುವಕರನ್ನು ಸಜ್ಜುಗೊಳಿಸಬಹುದು.

—ಫ್ರಾಂಕ್ಲಿನ್ ರೂಸ್‌ವೆಲ್ಟ್